<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ. **470/2025**

ಪಿ.ಡಬ್ಲ್ಯೂ-**05**

ಸಿ.ಡಬ್ಲ್ಯೂ-**20**

ಸಾಕ್ಷಿದಾರರ ಹೆಸರು ಃ ರಮೇಶ್ ಗುಗ್ಗರಿ

ತಂದೆ ಹೆಸರು ಃ ಸದಾಶಿವ

ವಯಸ್ಸು ಃ **30** ವರ್ಷ

ಕೆಲಸ ಃ ಪಿ.ಎಸ್.ಐ

ವಾಸ ಸ್ಥಳ ಃ ತಿಪ್ಟೂರು

ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾದ ದಿನಾಂಕಃ **13-07-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

ದಿನಾಂಕಃ 17.10.2023 ರಿಂದ 28.03.2026 ರ ವರೆಗೆ ಗೌರಿಬಿದನೂರು ಗ್ರಾಮಾಂತರ ಠಾಣೆ ಯಲ್ಲಿ ಪಿ.ಎಸ್.ಐ ಆಗಿ ಕಾರ್ಯನಿರ್ವಹಿಸುತ್ತಿದೆ.

ದಿಃ 01.12.2024 ರಂದು, ಠಾಣಾ ಮೊಕದ್ದಮೆ ಸಂಖ್ಯೆ324/2024 ರ ಕಡತವನ್ನು ಚಾ.ಸಾ-19 ರಿಂದ ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಯನ್ನು ನಡೆಸಿರುತ್ತೇನೆ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರನ್ನು ಬರಮಾಡಿಕೊಂಡು ಪಂಚನಾಮೆಯನ್ನು ಬೆಳಗ್ಗೆ 09.00 ರಿಂದ 10.00 ಗಂಟೆಯ ಸಮಯದಲ್ಲಿ ಬರೆದಿರುತ್ತೇನೆ. ನಂತರ ಅದೇ ದಿನ 11.00 ರಿಂದ 01.00 ಗಂಟೆಯ ವರೆಗೆ ಪಂಚರನ್ನು ಬರಮಾಡಿಕೊಂಡು ಮೃತನ ಶವ ತನಿಖಾ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಮೃತ ದೇಹವನ್ನು ಸಂಬಂಧಿಕರಿಗೆ ಹಸ್ತಾಂತರ ಮಾಡಿರುತ್ತೇನೆ. ಅದೇ ದಿನ ಅಪಘಾತಕ್ಕೀಡಾದ ವಾಹನವನ್ನು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 02.00 ರಿಂದ 03.00 ರ ಸಮಯದಲ್ಲಿ ಪಂಚರನ್ನು ಬರಮಾಡಿಕೊಂಡು ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ವಾಹನವನ್ನು ಮಾಲುಪಟ್ಟಿಯಲ್ಲಿ ಸೇರಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾ.ಸಾ-9 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪೊಟೋಗಳನ್ನು ವಶಪಡಿಸಿಕೊಂಡಿರುವ ಸರ್ಟಿಫಿಕೇಟ್ ಅನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 05.12.2024 ರಂದು ಗೌರಿಬಿದನೂರು ಸರ್ಕಾರಿ ಆಸ್ಪತ್ರೆಯಿಂದ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ

17.12.2024 ರಂದು ಆರೋಪಿ 1 ನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 19.12.2024 ರಂದು ಆರ್.ಟ್.ಓ ಅಧಿಕಾರಿಗಳಿಗೆ ವಾಹನವನ್ನು ತಪಾಸಣೆ ನಡೆಸಲು ಮನವಿ ಸಲ್ಲಿಸಿರುತ್ತೇನೆ. ದಿನಾಂಕ 20.12.2024 ರಂದು ವರದಿಯನ್ನು ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 24.12.2024 ರಂದು ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ನೀಡುವಂತೆ ಮಾನ್ಯ ತಾಲ್ಲೂಕು ದಂಡಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿಕೊಂಡಿರುತ್ತೇನೆ. ದಿನಾಂಕ 31.12.2024 ರಂದು ಟ್ರ್ಯಾಕ್ಟರ ಮಾಲೀಕರಾದ ಮುತ್ತಪ್ಪರವರಿಗೆ 133 ನೊಟೀಸ್ ಜಾರಿ ಮಾಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸದರಿ ವಾಹನವನ್ನು ಇಂಡೆಮ್ನಿಟಿ ಬಾಂಡ್ ಮೂಲಕ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 05.02.2025 ರಂದು ದಾಖಲಾತಿಗಳನ್ನು ಮಾನ್ಯ ತಾಲ್ಲೂಕು ದಂಡಾಧಿಕಾರಿಗಳ ಕಛೇರಿಯಿಂದ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**2** ಡಿ ಎಂದು ಗುರುತಿಸಲಾಯಿತು. ನಿಪಿ-3 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**3** ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-4 ರಿಂದ 6 ನ್ನು ತೋರಿಸಲಾಗಿ ಗುರುತಿಸಿರುತ್ತಾರೆ. ನಿಪಿ-7 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**7** ಎ ಎಂದು ಗುರುತಿಸಲಾಯಿತು. ನಿಪಿ-8 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**8** ಎ ಎಂದು ಗುರುತಿಸಲಾಯಿತು. ನಿಪಿ-9 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**9** ಎ ಎಂದು ಗುರುತಿಸಲಾಯಿತು. ನಿಪಿ-10 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಅದನ್ನು ನಿಪಿ-**10** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ 133 ರ ನೋಟೀಸ್‌ನ್ನು ತೋರಿಸಲಾಗಿ, ಅದನ್ನು ಗುರುತಿಸಿದ್ದು, ಅದನ್ನು ನಿಪಿ-**13** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**13** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನೋಟೀಸ್ ನ ಉತ್ತರವನ್ನು ತೋರಿಸಲಾಗಿ, ಅದನ್ನು ಗುರುತಿಸಿದ್ದು, ಅದನ್ನು ನಿಪಿ-**14** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**14** ಎ ಎಂದು ಗುರುತಿಸಲಾಯಿತು. ದಿನಾಂಕ 04.02.2025 ರ ಮಾನ್ಯ ದಂಡಾಧಿಕಾರಿಯವರಿಗೆ ನೀಡಿರುವ ಒಂದು ಮನವಿಯನ್ನು ತೋರಿಸಲಾಗಿ, ಅದನ್ನು ಗುರುತಿಸಿದ್ದು, ಅದನ್ನು ನಿಪಿ-**15** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**15** ಎ ಎಂದು ಗುರುತಿಸಲಾಯಿತು. ಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರು ತಕರಾರು ಸಲ್ಲಿಸಿರುವುದಿಲ್ಲ. ಅಪಘಾತವು ಖಾಸಗಿ ಜಮೀನಿನಲ್ಲಿ ನಡೆದಿದ್ದ ಕಾರಣ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುವುದಿಲ್ಲ. ದಿನಾಂಕ 07.02.2025 ರಂದು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಶ್ರೀ .ಬಿ.ಎಲ್ ವಕೀಲರಿಂದಃ

ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ನಿಪಿ-2 ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಸಹಾಯವಾಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು